ಆಕಾಶವಾಣಿ 27.06.2025

ಪ್ರದೇಶ ಸಮಾಚಾರ 07.05 A.M.

ಓದುತ್ತಿರುವವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

- AXIOM ಮಿ ´ನ್ 4: ಧಾರವಾಡದ ಕೃಷಿ ವಿಶ್ವವಿದ್ಯಾಲಯದಿಂದ, ಹೆಸರು ಹಾಗೂ ಮೆಂತೆ ಕಾಳು, ಸಂಶೋಧನಾರ್ಥ, ಬಾಹ್ಯಾಕಾಶ ನಿಲ್ದಾಣಕ್ಕೆ, ರವಾನೆ.
- 'ಪ್ರಧಾನಮಂತ್ರಿ ದಿವ್ಯಶಾ, ಹುಬ್ಬಳ್ಳಿ ಕೇಂದ್ರ': ವಿಶೇಷಚೇತನರು ಹಾಗೂ ಹಿರಿಯ ನಾಗರಿಕರಿಗೆ, ಒಂದು ಕೋಟಿ ಮೌಲ್ಯದ, ಸಲಕರಣೆಗಳ ವಿತರಣೆ.
- ತುರ್ತು ಪರಿಸ್ಥಿತಿಯ, ಕರಾಳ ಅಧ್ಯಾಯಕ್ಕೆ 50 ವರ್ಷ; ದೇಶಾದ್ಯಂತ ದೀಪಶಿಖಾ ಯಾತ್ರೆ.
- ನಾಡಪ್ರಭು ಶ್ರೀ ಕೆಂಪೇಗೌಡರ, 516ನೇ ಜಯಂತ್ಯುತ್ಸವ, ಇಂದು.

<><><>

ಈಗ ವಾರ್ತೆಗಳ ವಿವರ

<><><>

ಹರ್ಷ

ಗಗನಯಾತ್ರೆ/ಮೊಳಕೆ

ಭಾರತೀಯ ಗಗನಯಾತ್ರಿ, ಶುಭಾಂಶು ಶುಕ್ಲಾ ಸೇರಿ, ಮೂವರು ಗಗನಯಾತ್ರಿಗಳನ್ನು ಹೊತ್ತೊಯ್ದ, AXIOM ಮಿ ´ನ್ 4 ಗಗನನೌಕೆ, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ, ಯಶಸ್ವಿಯಾಗಿ ಜೋಡಣೆಯಾಗಿದೆ.

ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್, ಶುಭಾಂಶು ಶುಕ್ಲಾ, ನಾಸಾದ ಕಕ್ಷೆಯ ಪ್ರಯೋಗಾಲಯಕ್ಕೆ ಭೇಟಿ ನೀಡಿದ, ಮೊದಲ ಭಾರತೀಯ ಎನ್ನುವ ಕೀರ್ತಿಗೆ ಭಾಜನರಾದರು.

ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಹೆಸರು ಮತ್ತು ಮೆಂತೆ ಕಾಳಿನ ಬೀಜಗಳನ್ನು, AXIOM 4 ಬಾಹ್ಯಾಕಾಶ ಯೋಜನೆಗಾಗಿ, ಜೀವಸೂತ್ರ ಪರೀಕ್ಷೆ, 'ಟ್ರಾನ್ಸ್ ಕ್ರಿಪ್ಟೋಮ್' ವಿಶ್ಲೇಷಿಸಲು, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಿದೆ.

ಉಪ ಕುಲಪತಿ ಪಿ.ಎಲ್. ಪಾಟೀಲ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಪಿ.ಎಲ್.ಪಾಟೀಲಧ್ವನಿ 60 ಸೆಕೆಂದುಗಳು

<><><>

ಮೈಸೂರಿನ, ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ – ಸಿ.ಎಫ್.ಟಿ.ಆರ್.ಐ. ಸಿದ್ಧಪಡಿಸಿರುವ, ಹಲ್ವಾ, ಮೊಸರನ್ನ, ಮಾವಿನ ರಸ, ಹಂಗೇರಿಯಾದ, ಕೆಂಪು ಮೆಣಸಿನ ಮಸಾಲೆಯುಕ್ತ ಚಟ್ನಿಯನ್ನು ಶುಭಾಂಶು ಹಾಗೂ ಇತರೆ ಮೂವರು ಗಗನಯಾತ್ರಿಗಳು, ಸೇವಿಸಲಿದ್ದಾರೆ.

ಜೋಶಿ/ದಿವ್ಯಶಾ

ಭಾರತೀಯ ಕೃತಕ ಅಂಗಗಳ ಉತ್ಪಾದನಾ ನಿಗಮ – ALIMCO ಮತ್ತು ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆ – ಕೆ.ಎಂಸಿ. ಆರ್.ಐ. ಸಹಯೋಗದಲ್ಲಿ, ಐದು ತಿಂಗಳ ಹಿಂದೆ, 'ಪ್ರಧಾನಮಂತ್ರಿ ದಿವ್ಯಶಾ ಕೇಂದ್ರ – PM'D.K. ಶಾಖೆ, ಕಾರ್ಯಾರಂಭಿಸಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ.

ಕಳೆದ ಐದು ತಿಂಗಳಲ್ಲಿ, 'ಪ್ರಧಾನಮಂತ್ರಿ ದಿವ್ಯಶಾ ಕೇಂದ್ರ'ದ ಶಾಖೆ, ಒಂದು ಕೋಟಿಗೂ ಅಧಿಕ ಮೌಲ್ಯದ, ಸಾಧನ, ಸಲಕರಣೆಗಳನ್ನು, ವಿಶೇಷಚೇತನರಿಗೆ ಹಾಗೂ ಹಿರಿಯ ನಾಗರಿಕರಿಗೆ ವಿತರಿಸಿದೆ ಎಂದು, ಅವರು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಶ್ಲಾಘಿಸಿದ್ದಾರೆ.

'ಪ್ರಧಾನಮಂತ್ರಿ ದಿವ್ಯಶಾ ಕೇಂದ್ರ, ವಿಶೇಷಚೇತನರನ್ನು ಸಬಲೀಕರಿಸುವ ಗುರಿ ಹೊಂದಿದ್ದು, ಅವರ ಜೀವನದ ಗುಣಮಟ್ಟ ಮತ್ತು ಅವಕಾಶಗಳನ್ನು ಹೆಚ್ಚಿಸಲು, ನಿರ್ಣಾಯಕ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತಿದೆ. ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯಕ್ಕೆ ಸಚಿವ ಜೋಶಿ, ಕೃತಜ್ಞತೆ ಸಲ್ಲಿಸಿದ್ದಾರೆ.

ಶುದ್ಧ ಜಲ

ಸುರಕ್ಷಿತವಾಗಿ ನಿರ್ವಹಿಸಿ, ಶುದ್ಧ ಕುಡಿಯುವ ನೀರು ಪೂರೈಸಿದ ಹಿನ್ನೆಲೆ, ಅತಿಸಾರ ರೋಗಗಳಿಂದ, ವಾರ್ಷಿಕ 4 ಲಕ್ಷ ಸಾವುಗಳನ್ನು ತಡೆಗಟ್ಟಲಾಗಿದೆ ಎಂದು, ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

<><><>

ಕೇಂದ್ರ 'ಜಲ್ ಜೀವನ್ ಮಿ 'ನ್' ಯೋಜನೆಯಡಿ, ದೇಶಾದ್ಯಂತ 15 ಕೋಟಿಗೂ ಹೆಚ್ಚು ಮನೆಗಳಿಗೆ, ಕೊಳಾಯಿ ಮೂಲಕ, ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ ಎಂದು, ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್.ಪಾಟೀಲ ತಿಳಿಸಿದ್ದಾರೆ. ಬಾಕಿ 4 ಕೋಟಿ ಮನೆಗಳಿಗೆ, ನಲ್ಲಿ ನೀರಿನ ಸಂಪರ್ಕವನ್ನು, 2028 ರ ವೇಳೆಗೆ ಕಲ್ಪಿಸಲು, ಜಲ್ ಜೀವನ್ ಮಿ 'ನ್ ಯೋಜನೆಯಡಿ, ಸಂಕಲ್ಪಿಸಲಾಗಿದೆ ಎಂದು, ಮಾಹಿತಿ ನೀಡಿದ್ದಾರೆ.

ಏಕ್ ಪೇಢ್

ಅಂತಾರಾಷ್ಟ್ರೀಯ ಸಹಕಾರ ವ ರ್ಷಾಚರಣೆ – 2025 ರ ಅಂಗವಾಗಿ, “ವಿಶ್ವ ಪರಿಸರ ದಿನಾಚರಣೆ” ಪ್ರಯುಕ್ತ, ತಾಯಿಯ ಹೆಸರಿನಲ್ಲಿ ಒಂದು ಸಸಿ ನೆಡುವ, ಏಕ ಪೇಡ್ ಮಾ ಕೆ ನಾಮ್)” ಕಾರ್ಯಕ್ರಮಕ್ಕೆ, ಸಹಕಾರ ಸಂಘಗಳ ಉಪ ನಿಬಂಧಕಿ ಎಸ್. ಎಸ್. ಕಬಾಡೆ ಅವರು, ಗದಗ ನ, ಸಿ.ಎಸ್. ಪಾಟೀಲ ಪ್ರೌಢ ಶಾಲೆಯಲ್ಲಿ, ಚಾಲನೆ ನೀಡಿದರು.

ಹರ್ಷ/ಹೊಂಗಲ್/ಪಿಟಿಸಿ ಗದಗ (55)

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ತುರ್ತು ಪರಿಸ್ಥಿತಿ

ತುರ್ತು ಪರಿಸ್ಥಿತಿ ಹೇರಿಕೆಯಾಗಿ 50 ವರ್ಷ ತುಂಬಿದ ಹಿನ್ನೆಲೆ, ದೇಶಾದ್ಯಂತ ಸಂವಿಧಾನ ಹತ್ಯಾ ದಿನದ ಅಂಗವಾಗಿ, ದೀಪಶಿಖಾ ಯಾತ್ರೆ, ದೇಶಾದ್ಯಂತ 2026ರ ಮಾರ್ಚ್ 21ರ ವರೆಗೆ, ಜರುಗಲಿದೆ.

ತುರ್ತು ಪರಿಸ್ಥಿತಿಯ ಕರಾಳ ಅಧ್ಯಾಯ ನೆನಪಿಸಲು, ಸಂವಿಧಾನ ಹತ್ಯೆ ದಿನ ಶೀರ್ಷಿಕೆಯ ಕಿರುಚಿತ್ರವನ್ನು, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಜಾಲತಾಣದಲ್ಲಿ ಪ್ರದರ್ಶಿಸಲಾಗುತ್ತಿದೆ.

ತುರ್ತು ಪರಿಸ್ಥಿತಿಯಲ್ಲಿ, ಜೈಲು ವಾಸ ಅನುಭವಿಸಿದ, ಹುಬ್ಬಳ್ಳಿಯ ಹಿರಿಯ ಸಾಮಾಜಿಕ ಕಾರ್ಯಕರ್ತ ಹಾಗೂ ಉದ್ಯಮಿ ಅಚ್ಯುತ ಲಿಮಯೆ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ಅಚ್ಯುತ ಲಿಮಯೆ ಧ್ವನಿ 54 ಸೆಕೆಂದುಗಳು

<><><>

ತುರ್ತು ಪರಿಸ್ಥಿತಿ/ಛಲವಾದಿ

ತುರ್ತು ಪರಸ್ಥಿತಿ ದೇಶಕ್ಕೆ ಅಂಟಿದ ಕಪ್ಪುಚುಕ್ಕೆ. ಸ್ವಾರ್ಥಕ್ಕಾಗಿ ಅಂದಿನ ಪ್ರಧಾನಮಂತ್ರಿ ಕಾರಣ ಎಂದು, ವಿಧಾನ ಪರಿ ‘ತ್ತಿನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

ಯಾದಗಿರಿಯ, ಲಿಂಗೇರಿ ಕೊನಪ್ಪ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ, ತುರ್ತು ಪರಸ್ಥಿತಿ; ಕರಾಳ ನೆನಪು, ಕಾರ್ಯಕ್ರಮದಲ್ಲಿ ಅವರು, ಮಾತನಾಡಿದರು.

ತುರ್ತು ಪರಸ್ಥಿತಿ ಹೇರಿ, ತಮ್ಮ ಅಧಿಕಾರ ಉಳಿಸಿಕೊಂಡ ಅಪಕೀರ್ತಿ ಅಂದಿನ ಪ್ರಧಾನಮಂತ್ರಿಯವರಿಗೆ ಸಲ್ಲುತ್ತದೆ, ಎಂದರು.

<><><>

ಚಿನ್ನಸ್ವಾಮಿ ಕ್ರೀಡಾಂಗಣ ಕಾಲ್ತುಳಿತದ ದುರ್ಘಟನೆಯಲ್ಲಿ ಮೃತಪಟ್ಟ, ಯಾದಗಿರಿ ತಾಲೂಕಿನ ಹೊನಗೇರಾ ಗ್ರಾಮದ, ಶಿವಲಿಂಗ ಕುಂಬಾರ ಮನೆಗೆ ಭೇಟಿ ನೀಡಿದ, ಛಲವಾದಿ ನಾರಾಯಣಸ್ವಾಮಿ ಅವರು, ಕುಟುಂಬದವರಿಗೆ, ಸಾಂತ್ವನ ಹೇಳಿದರು.

ಕೆಂಪೇಗೌಡ ಜಯಂತಿ

ಅಪ್ರತಿಮ ಆಡಳಿತಗಾರ, ಬೆಂಗಳೂರು ಮಹಾನಗರದ ನಿರ್ಮಾತೃ, ನಾಡಪ್ರಭು ಕೆಂಪೇಗೌಡರ, 516ನೇ ಜಯಂತ್ಯುತ್ಸವ, ಇಂದು.

ಬೆಂಗಳೂರಿನಲ್ಲಿ ಆಯೋಜಿತ, ರಾಜ್ಯ ಮಟ್ಟದ, ನಾಡಪ್ರಭು ಕೆಂಪೇಗೌಡರ ಜಯಂತಿ ಹಿನ್ನೆಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲೂಕು, ಆವತಿ ಗ್ರಾಮದಿಂದ, ಇಂದು ಬೆಳಗ್ಗೆ 8.30ಕ್ಕೆ ಕೆಂಪೇಗೌಡ ಜ್ಯೋತಿ ರಥಯಾತ್ರೆ ಹೊರಡಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್ ಮುನಿಯಪ್ಪ ಅವರು, ಚಾಲನೆ ನೀಡಲಿದ್ದಾರೆ.

ಸುಮ್ಮನಹಳ್ಳಿ ಬಳಿಯ, ಬಾಬು ಜಗಜೀವನ ರಾಮ ಭವನದಲ್ಲಿ, ಇಂದು ಮಧ್ಯಾಹ್ನ 12.30ಕ್ಕೆ ಪ್ರಧಾನ ಕಾರ್ಯಕ್ರಮ ಆಯೋಜಿತವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು, ನಾಡಿನ ಸಾಧಕ ಗಣ್ಯರಿಗೆ ಹಾಗೂ ಕರ್ನಾಟಕ ಸೋಪ್ಸ್ ಮತ್ತು ಮಾರ್ಜಕ ಸಂಸ್ಥೆಗೆ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ನೀಡಿ, ಗೌರವಿಸಲಿದ್ದಾರೆ ಎಂದು, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ, ತಿಳಿಸಿದ್ದಾರೆ.

ಹರ್ಷ/ಹೊಂಗಲ್/ಟಿಟಿಸಿ ಬೆಂ.ಗ್ರಾ. (56)/ಎಚ್.ಆರ್.ಸುಧೀಂದ್ರ

ಸಕಾಲ

'ಸಕಾಲ ಸೇವೆ' ಒದಗಿಸುವಲ್ಲಿ, ಮೇ ತಿಂಗಳಾಂತ್ಯಕ್ಕೆ, ಕಲಬುರಗಿ ಜಿಲ್ಲೆ ತೃತೀಯ ಸ್ಥಾನ ಗಳಿಸಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಕಳೆದ **6** ತಿಂಗಳಲ್ಲಿ, ಕಲಬುರಗಿ ಜಿಲ್ಲೆಯ, ವಿವಿಧ ಇಲಾಖೆಗಳಲ್ಲಿ, **6** ಲಕ್ಷ **38** ಸಾವಿರದ **840** ಅರ್ಜಿಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡಿ, ಶೇಕಡ **99** ದಶಾಂಶ **6-7** ರಷ್ಟು, ಪ್ರಗತಿ ಸಾಧಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

ಡಿಕೆಶಿ/ಸ್ಪಷ್ಟನೆ

ಕಟ್ಟಡ ನಕ್ಷೆ ಮಂಜೂರು, ಸ್ವಾಧೀನ ಪ್ರಮಾಣಪತ್ರ ಇಲ್ಲದೆ, ನೀರು ಹಾಗೂ ವಿದ್ಯುತ್ ಸಂಪರ್ಕ ನೀಡುವಂತಿಲ್ಲ ಎಂದು, ಸರ್ವೋಚ್ಚ ನ್ಯಾಯಾಲಯ, ಇತ್ತೀಚೆಗೆ ತೀರ್ಪು ನೀಡಿದೆ. ಹೀಗಾಗಿ, ಅನುಮತಿ ಇಲ್ಲದೆ, ಜನ ಮನೆ ಕಟ್ಟಬಾರದು ಎಂದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಎಕ್ಸ್ ಮಾಧ್ಯಮದಲ್ಲಿ ಸ್ಪಷ್ಟ ಪಡಿಸಿದ್ದಾರೆ.

ಹರ್ಷ/ಹೊಂಗಲ್/ಎಕ್ಸ್ ಮಾಧ್ಯಮ/

ಈಗ ಸಂಕ್ಷಿಪ್ತ ಸುದ್ದಿಗಳು:

ಮುಖ್ಯಮಂತ್ರಿ ಸಿದ್ದರಾಮಯ್ಯ, ಜುಲೈ **4** ರಂದು, ದೇವನಹಳ್ಳಿ, ಚನ್ನರಾಯಪಟ್ಟಣ ರೈತ ಹೋರಾಟಗಾರರು ಮತ್ತು ಸಂಯುಕ್ತ ಹೋರಾಟ ವೇದಿಕೆ ಮುಖಂಡರ ಜೊತೆ, ಸಭೆ ನಡೆಸಲಿದ್ದಾರೆ.

ಚನ್ನರಾಯಪಟ್ಟಣ ಹೋಬಳಿಯ, **13** ಹಳ್ಳಿಗಳ ರೈತರು, ಸಾವಿರದ **177** ಎಕರೆ ಭೂಮಿ ಉಳಿಸಿಕೊಳ್ಳಲು, ಕಳೆದ ಹಲವು ದಿನಗಳಿಂದ, ಹೋರಾಟ ನಡೆಸುತ್ತಿದ್ದಾರೆ. ಧಾರವಾಡದಲ್ಲಿ, ರೈತರ ಹೋರಾಟ ಬೆಂಬಲಿಸಿ, ಪ್ರತಿಭಟನೆ ನಡೆಸಿದರು.

ಸುತ್ತಮುತ್ತಲಿನಲ್ಲಿ ಜನರು, ಆಪ್ತರು ಯಾವುದೇ ಆಪತ್ತು, ತುರ್ತು ಪರಿಸ್ಥಿತಿಯಲ್ಲಿದ್ದರೆ **112** ಕ್ಕೆ ಕರೆ ಮಾಡಿ ತಿಳಿಸುವಂತೆ, ಶಿವಮೊಗ್ಗ ಜಿಲ್ಲೆ, ಹಿರಿಯ ಸಿವಿಲ್ ನ್ಯಾಯಾಧೀಶ ಸಂತೋ ್ ಎಂ.ಎಸ್. ಮನವಿ ಮಾಡಿದ್ದಾರೆ.

ವಿಜಯಪುರ ಜಿಲ್ಲೆಯ ಕೃಷ್ಣ, ಭೀಮ ಮತ್ತು ಡೋಣಿ ನದಿ ನೀರಿನ ಒಳ ಹರಿವಿನ ಪ್ರಮಾಣದಲ್ಲಿ, ಹೆಚ್ಚಳವಾಗುವ ಸಾಧ್ಯತೆ ಇದೆ. ನದಿ ಪಾತ್ರದ ಗ್ರಾಮಗಳ ಜನ, ಪ್ರವಾಹ ಪರಿಸ್ಥಿತಿ ಬಗ್ಗೆ, ಮುನ್ನಚ್ಚರಿಕೆ ವಹಿಸುವಂತೆ, ಜಿಲ್ಲಾಧಿಕಾರಿ ಟಿ.ಭೂಬಾಲನ್ ತಿಳಿಸಿದ್ದಾರೆ. **(41)**

ಚಿಕ್ಕಬಳ್ಳಾಪುರ ಜಿಲ್ಲೆಯ, ನಂದಿ ಗಿರಿಧಾಮದಲ್ಲಿ, ಜುಲೈ 2 ರಂದು, ರಾಜ್ಯ ಸಚಿವ ಸಂಪುಟದ, 14ನೇ ಸಭೆ ನಡೆಯಲಿದೆ. ಮುಂಜಾಗ್ರತಾ ಕ್ರಮವಾಗಿ, ಈ ತಿಂಗಳ 30 ರಿಂದ, ಜುಲೈ 3ರ ವರೆಗೆ, ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ತಿಳಿಸಿದ್ದಾರೆ. (50)

ಧಾರವಾಡ ತಾಲೂಕಿನ ಅಮ್ಮಿನಬಾವಿ ಗ್ರಾಮದ, ಸಂಸ್ಥಾನ ಪಂಚಗೃಹ ಹಿರೇಮಠದ ಲಿಂಗೈಕ್ಯ ಶ್ರೀ ಗುರುಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ, 86ನೇ ಪುಣ್ಯಾರಾಧನೆ ಇಂದು ಜರುಗಲಿದೆ.

ಅಂತಾರಾಷ್ಟ್ರೀಯ, ಮಾದಕ ದ್ರವ್ಯ ವ್ಯಸನ ಮುಕ್ತ ದಿನದ ಅಂಗವಾಗಿ, ಬಾಗಲಕೋಟೆ ಜಿಲ್ಲೆಯ, ವಿವಿಧ ಶಾಲೆ ಹಾಗೂ ಕಾಲೇಜುಗಳ, 4 ಲಕ್ಷ ಮಕ್ಕಳಿಗೆ, ಪ್ರತಿಜ್ಞಾ ವಿಧಿ ಬೋಧಿಸಲಾಯಿತು. (27)

ತಿರುಪತಿ–ಔರಂಗಾಬಾದ ಎಕ್ಸ್‌ಪ್ರೆಸ್ ರೈಲು, ಛಾಲ್ಕಿ ನಿಲ್ದಾಣದಲ್ಲಿ ತಾತ್ಕಾಲಿಕ ನಿಲುಗಡೆಯಾಗಲಿದೆ ಎಂದು, ಸಂಸದ ಸಾಗರ ಖಂಡ್ರೆ ತಿಳಿಸಿದ್ದಾರೆ.

ಹರ್ಷ/ಹೊಂಗಲ್/ವಿಕ್ಸ್ ಖಾತೆ/ಜಿಲ್ಲಾವಾರು ಕ.ವಾ.ಇ.ಪ್ರ.

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- AXIOM ಮಿ ’ನ್ 4; ಧಾರವಾಡದ ಕೃಷಿ ವಿಶ್ವವಿದ್ಯಾಲಯದಿಂದ, ಹೆಸರು ಹಾಗೂ ಮೆಂತೆ ಕಾಳು, ಸಂಶೋಧನಾರ್ಥ, ಬಾಹ್ಯಾಕಾಶ ನಿಲ್ದಾಣಕ್ಕೆ, ರವಾನೆ.
- ‘ಪ್ರಧಾನಮಂತ್ರಿ ದಿವ್ಯಶಾ, ಹುಬ್ಬಳ್ಳಿ ಕೇಂದ್ರ’; ವಿಶೇಷಚೇತನರು ಹಾಗೂ ಹಿರಿಯ ನಾಗರಿಕರಿಗೆ, ಒಂದು ಕೋಟಿ ಮೌಲ್ಯದ, ಸಲಕರಣೆಗಳ ವಿತರಣೆ.
- ತುರ್ತು ಪರಿಸ್ಥಿತಿಯ, ಕರಾಳ ಅಧ್ಯಾಯಕ್ಕೆ 50 ವರ್ಷ; ದೇಶಾದ್ಯಂತ ದೀಪಶಿಖಾ ಯಾತ್ರೆ.
- ನಾಡಪ್ರಭು ಶ್ರೀ ಕೆಂಪೇಗೌಡರ, 516ನೇ ಜಯಂತ್ಯುತ್ಸವ, ಇಂದು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಆಷಾಢಶುಕ್ರವಾರ

ಆ ಾಢ ಮಾಸದಲ್ಲಿ, ಮೈಸೂರಿನ ಚಾಮುಂಡಿ ಬೆಟ್ಟಕ್ಕೆ, ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನಕ್ಕೆ, ಸಹಸ್ರಾರು ಭಕ್ತಾದಿಗಳು ಆಗಮಿಸುವ ಹಿನ್ನೆಲೆ, ಸಾರ್ವಜನಿಕರ ಸುರಕ್ಷತೆಗಾಗಿ, ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ ಎಂದು, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಸಾವಿರದ 700ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಲಲಿತಾದ್ರಿಪುರ, ಉತ್ತನಹಳ್ಳಿ, ತಾವರೆ ಕಟ್ಟೆ ಮಾರ್ಗದಿಂದ, ಖಾಸಗಿ ವಾಹನಗಳ ಪ್ರವೇಶ ಇರುವುದಿಲ್ಲ ಎಂದು, ಸ್ಪಷ್ಟ ಪಡಿಸಿದ್ದಾರೆ.

ಹರ್ಷಹೊಂಗಲ್ಟಿಟಿಸಿ ಮೈಸೂರು (26)

ಬೈರೇಗೌಡಪೋಡಿ

ತೋಟಗಾರಿಕೆ ಭೂಮಿಯನ್ನು, ಗುತ್ತಿಗೆಗೆ ನೀಡುವ ಯೋಜನೆಗೆ, ಅರ್ಜಿ ಸಲ್ಲಿಸುವ ಕಾಲಾವಕಾಶ ವಿಸ್ತರಿಸಲಾಗಿದೆ.

ಅರಣ್ಯ ಮತ್ತು ಕಂದಾಯ ಇಲಾಖೆಯ, ಜಂಟಿ ಸಮೀಕ್ಷೆ ಪೂರ್ಣಗೊಂಡ ಬಳಿಕ, ಲಭ್ಯ ಭೂಮಿಯ ನಿಖರ ಮಾಹಿತಿ ಪಡೆದು, ಅರ್ಜಿಗಳ ವಿಲೇವಾರಿ ಪ್ರಕ್ರಿಯೆ ಪೂರ್ಣಗೊಳಿಸುವುದಾಗಿ, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಚಿಕ್ಕಮಗಳೂರಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

ಕಳೆದ ಮೂರು ವರ್ಷಗಳಲ್ಲಿ ಕೇವಲ, 5 ಸಾವಿರದ 800 ಪ್ರಕರಣಗಳ ಪೋಡಿ ದುರಸ್ತಿಯಾಗಿದ್ದವು. ಅಭಿಯಾನ ಆರಂಭಿಸಿ, ಕಳೆದ ಏಳೆಂಟು ತಿಂಗಳಲ್ಲಿ, ರೈತರಿಗೆ ಮಂಜೂರಾದ 82 ಸಾವಿರ ಜಮೀನುಗಳ ಅಳತೆ ಮಾಡಲಾಗಿದೆ ಎಂದು, ಸಚಿವರು ತಿಳಿಸಿದರು.

ಹರ್ಷಹೊಂಗಲ್ಟಿಟಿಸಿ ಚಿಕ್ಕಮಗಳೂರು (37)

ಹುಲಿಸಾವು

ಚಾಮರಾಜನಗರ ಜಿಲ್ಲೆ, ಮಲೈ ಮಹದೇಶ್ವರ ಬೆಟ್ಟದ ಅರಣ್ಯ ಪ್ರದೇಶದಲ್ಲಿ,ಒಂದುಹುಲಿ ಹಾಗೂ ಮೂರು ಮರಿಗಳು ಅಸಹಜ ರೀತಿಯಲ್ಲಿ, ಸಾವಿಗೀಡಾಗಿರುವ ಬಗ್ಗೆ,ತನಿಖೆ ನಡೆಸಿ, ಮೂರು ದಿನಗಳೊಳಗಾಗಿ ವರದಿ ಸಲ್ಲಿಸುವಂತೆ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಹಿರಿಯ ಅರಣ್ಯಾಧಿಕಾರಿಗಳಿಗೆ, ಸೂಚಿಸಿದ್ದಾರೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ತಂಡದಿಂದ, ತನಿಖೆ ನಡೆಸುವಂತೆ, ನಿರ್ದೇಶಿಸಿದ್ದಾರೆ.

563 ಹುಲಿಗಳೊಂದಿಗೆ, ಕರ್ನಾಟಕ ದೇಶದಲ್ಲೇ2ನೇ ಸ್ಥಾನದಲ್ಲಿದೆ ಎಂದು, ಅವರು ತಿಳಿಸಿದ್ದಾರೆ.

<><><>

ಮಲೈ ಮಹದೇಶ್ವರ ಬೆಟ್ಟ ಅರಣ್ಯ ಪ್ರದೇಶದಲ್ಲಿ, ಒಂದು ಹುಲಿ ಮತ್ತು ಮೂರು ಮರಿಗಳು, ಅನುಮಾನಾಸ್ಪದ ರೀತಿಯಲ್ಲಿ, ಸಾವನ್ನಪ್ಪಿರುವುದು ಕಳವಳಕಾರಿ ಎಂದು, ರಾಜ್ಯ ಬಿಜೆಪಿ ಎಕ್ಸ್ ಮಾಧ್ಯಮದಲ್ಲಿ ತಿಳಿಸಿದೆ.

ಹರ್ಷ/ಹೊಂಗಲ್/ಎಕ್ಸ್ ಖಾತೆ